ಕರ್ನಾಟಕ ಸರ್ಕಾರ

ಸಂಖ್ಯೆ: ಮಮಅಇ/ಮಕ/ 07/2013-14 (ಭಾಗ-2

ನಿರ್ದೇಶಕರ ಕಛೇರಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
1ನೇ ಮಹಡಿ, ಬಹುಮಹಡಿಗಳ ಕಟ್ಟಡ,
ಬೆಂಗಳೂರು-01,
ದಿನಾಂಕ: 20-04-2013.

# ಸುತ್ತೋಲೆ

ವಿಷಯ : ಬಾಲ್ಯ ವಿವಾಹಕ್ಕೊಳಗಾದ ಮಕ್ಕಳ ಪುನರ್ವಸತಿಯಲ್ಲಿ ಜಿಲ್ಲಾ ಮಟ್ಟದ ರಕ್ಷಣಾ ಘಟಕ ಮತ್ತು ಮಕ್ಕಳ ಕಲ್ಯಾಣ ಸಮಿತಿ ಪಾತ್ರದ ಬಗ್ಗೆ.

ಉಲ್ಲೇಖ: ನಿವೃತ್ತ ಜಸ್ಟೀಸ್ ಶಿವರಾಜ್.ವಿ.ಪಾಟೀಲ್ ರವರ "ಕರ್ನಾಟಕ ರಾಜ್ಯದಲ್ಲಿನ ಬಾಲ್ಯ ವಿವಾಹ ತಡೆ" ಬಗೆಗಿನ ಕೋರ್ ಕಮಿಟಿಯ ವರದಿ ದಿನಾಂಕ:30-06-2011

******

ಬಾಲ ನ್ಯಾಯ ಕಾಯ್ದೆ 2000 ಹಾಗೂ ತಿದ್ದುಪಡಿ ಕಾಯ್ದೆ 2006ರನ್ವಯ ಬಾಲ್ಯ ವಿವಾಹಕ್ಕೊಳಗಾದ ಮಕ್ಕಳು ಅಥವಾ ಬಾಲ್ಯ ವಿವಾಹದಿಂದ ರಕ್ಷಿಸಲ್ಪಟ್ಟಿರುವ ಮಕ್ಕಳು ರಕ್ಷಣೆ ಮತ್ತು ಪೋಷಣೆಯ ಅಗತ್ಯವಿರುವ ಮಕ್ಕಳಾಗಿರುತ್ತಾರೆ.

ಬಾಲ್ಯ ವಿವಾಹ ತಡೆಗಟ್ಟಿದ ಸಂಧರ್ಭದಲ್ಲಿ ಮಕ್ಕಳು ಹಾಗೂ ಅವರ ಕುಟುಂಬದವರು ಕ್ಷೋಭೆಗೆ ಒಳಗಾಗುವುದರಿಂದ ಕುಟುಂಬಕ್ಕೆ ಸಹಾಯ ಹಸ್ತದ (ಆಪ್ತ ಸಮಾಲೋಚನೆ ಮತ್ತು ಮಾರ್ಗದರ್ಶನ) ಅಗತ್ಯವಿರುತ್ತದೆ. ಆದುದರಿಂದ ಪುನರ್ವಸತಿ ಬಗ್ಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮತ್ತು ಮಕ್ಕಳ ಕಲ್ಯಾಣ ಸಮಿತಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

ಬಾಲ್ಯ ವಿವಾಹ ತಡೆಗಟ್ಟಿದ ಸಂಧರ್ಭಗಳಲ್ಲಿ ಮಕ್ಕಳ ಪೋಷಕರು ಪೋಲಿಸ್ ಠಾಣೆಗಳಲ್ಲಿ ಲಿಖಿತ ಹೇಳಿಕೆ ನೀಡಿದಾಗ್ಯೂ ನಂತರದ ದಿನಗಳಲ್ಲಿ ವಿವಾಹ ನಡೆಸಿರುವ ಅನೇಕ ಪ್ರಸಂಗಗಳು ವರದಿಯಾಗಿವೆ. ವಿವಾಹ ತಡೆಗಟ್ಟಿದ ನಂತರ ಅನುಸರಣೆಯಾಗದಿದ್ದಲ್ಲಿ ಈ ರೀತಿ ಪ್ರಕರಣಗಳು ಹೆಚ್ಚಾಗಿ ವಿವಾಹ ತಡೆಗಟ್ಟಲು ಕೈಗೊಂಡ ಎಲ್ಲಾ ಶ್ರಮಗಳು ವ್ಯರ್ಥವಾಗುತ್ತವೆ, ಹೀಗಾಗಿ ವಿವಾಹ ತಡೆಗಟ್ಟಿದ ಅನುಸರಣೆ ಕಾರ್ಯಕ್ರಮ ಪ್ರಾಮುಖ್ಯತೆ ಹೊಂದಿರುತ್ತದೆ. ಹೆಚ್ಚು ಹೆಚ್ಚು ಅರಿವು ಮೂಡಿಸುವಿಕೆ ಮತ್ತು ಸಕಾಲಿಕ ಪ್ರಯತ್ನದಿಂದ ಸರ್ಕಾರದ ಬೆಂಬಲ ಹಾಗೂ ಮಕ್ಕಳಿಗಾಗಿ ಸಂರಕ್ಷಣೆ ವ್ಯವಸ್ಥೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ನಿರ್ವಹಿಸಬಹುದಾಗಿರುತ್ತದೆ.

ಹೀಗಾಗಿ ಬಾಲ್ಯ ವಿವಾಹವನ್ನು ತಡೆಗಟ್ಟಿ ರಕ್ಷಣೆ ಮಾಡಿದ ಸಂದರ್ಭಗಳಲ್ಲಿ ಮಕ್ಕಳ ವಿವರಗಳನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮತ್ತು ಮಕ್ಕಳ ಕಲ್ಯಾಣ ಸಮಿತಿಗೆ ಮಾಹಿತಿಯನ್ನು ಕಡ್ಡಾಯವಾಗಿ ನೀಡತಕ್ಕದ್ದು, ಮಕ್ಕಳ ಕಲ್ಯಾಣ ಸಮಿತಿ ಮಕ್ಕಳ ಪೋಷಕರನ್ನು ಕರೆಸಿ ಪುನರ್ವಸತಿ ಬಗ್ಗೆ

ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದು. ಪ್ರಕರಣವನ್ನು ಪರಿವೀಕ್ಷಣಾಧಿಕಾರಿಗಳು ಮೇಲ್ವಿಚಾರಣೆ ಹಾಗೂ ಅನುಸರಣೆ ಮಾಡಿದಾಗ ವಿವಾಹ ಮುಂದುವರೆಯುವುದನ್ನು ತಪ್ಪಿಸಲು ಸಾಧ್ಯವಾಗುತ್ತದೆ.

ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮತ್ತು ಮಕ್ಕಳ ಕಲ್ಯಾಣ ಸಮಿತಿ ಒಟ್ಟಾಗಿ ಸೇರಿ ಮಕ್ಕಳ ಭವಿಷ್ಯಕ್ಕೆ ಪೂರಕವಾದ ಮಾಹಿತಿಯನ್ನು ಒದಗಿಸಿ ಮಕ್ಕಳ ಭವಿಷ್ಯ ಉತ್ತಮವಾಗಲು ಬೇಕಾಗುವಂತಹ ಎಲ್ಲಾ ರೀತಿಯಲ್ಲಿ ಕುಟುಂಬಕ್ಕೆ ಸಹಕಾರ ಒದಗಿಸುವುದು. ಸರ್ಕಾರದ ವಿವಿಧ ಇಲಾಖೆಗಳಲ್ಲಿ ಲಭ್ಯವಿರುವ ಯೋಜನೆಗಳ ಬಗ್ಗೆ ಪರಿಚಯ ಮಾಡಿ ಸೂಕ್ತವಾದ ನೆರವನ್ನು ಒದಗಿಸಲು ಸಹಕಾರ ನೀಡುವುದು, ಹಾಗೂ ಅನುಬಂಧದಲ್ಲಿರುವಂತೆ ಕ್ರಮವಹಿಸುವುದು.

ಮಗುವು ತಾನಾಗಿಯೇ ಸಂಬಂಧಿಸಿದ ಕಛೇರಿಗೆ ಬಂದು ತನ್ನ ಬಾಲ್ಯ ವಿವಾಹದ ಬಗ್ಗೆ ದೂರು ನೀಡಿದಲ್ಲಿ ತಕ್ಷಣ ಆ ಮಗುವಿಗೆ ಅಗತ್ಯ ರಕ್ಷಣಾ ಮತ್ತು ಪರಿಹಾರದ ಪುನರ್ವಸತಿ ಕ್ರಮಗಳನ್ನು ಸಹಾ ತೆಗೆದುಕೊಳ್ಳಲು ಕ್ರಮ ವಹಿಸುವುದು.

ಉಪನಿರ್ದೇಶಕರು ವಿವಾಹ ತಡೆಗಟ್ಟಿದ ಎಲ್ಲಾ ಮಕ್ಕಳ ಪ್ರಕರಣಗಳಲ್ಲಿ ಮಕ್ಕಳ ವಿವರಗಳನ್ನು ಮಕ್ಕಳ ಕಲ್ಯಾಣ ಸಮಿತಿಗೆ ನೀಡಿರುವುದರ ಬಗ್ಗೆ ಖಾತ್ರಿ ಪಡಿಸಿಕೊಳ್ಳತಕ್ಕದ್ದು.

"ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ."

ನಿರ್ದೇಶಕರ ಪರವಾಗಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಬೆಂಗಳೂರು

ಪ್ರತಿಯನ್ನು:

1. ಎಲ್ಲಾ ಜಿಲ್ಲೆಯ ಉಪನಿರ್ದೇಶಕರು, ತಮ್ಮ ಜಿಲ್ಲಾ ವ್ಯಾಪ್ತಿಯ ಮತ್ತು ತಾಲ್ಲೂಕು ಮಟ್ಟದ ಬಾಲ್ಯ ವಿವಾಹ ನಿಷೇಧಾಧಿಕಾರಿಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ನೀಡತಕ್ಕದ್ದು.
2. ಎಲ್ಲಾ ಜಿಲ್ಲೆಯ ಮಕ್ಕಳ ರಕ್ಷಣಾಧಿಕಾರಿಗಳು,
3. ಎಲ್ಲಾ ಜಿಲ್ಲೆಯ ಅಧ್ಯಕ್ಷರು, ಮಕ್ಕಳ ಕಲ್ಯಾಣ ಸಮಿತಿ,
4. ಎಲ್ಲಾ ಜಿಲ್ಲೆಯ ಪರಿವೀಕ್ಷಣಾಧಿಕಾರಿಗಳು, ಪರಿವೀಕ್ಷಣಾ ಅಧಿನಿಯಮ.

## ಅನುಬಂಧ

### ಬಾಲ್ಯ ವಿವಾಹದ ನಿಷೇಧ ಕುರಿತಂತೆ

1) **ಗ್ರಾಮ ಪಂಚಾಯ್ತಿ ಪಾತ್ರ ಮತ್ತು ಹೊಣೆಗಾರಿಕೆ:**

- ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗುರುತಿಸಿರುವ ಬಾಲ್ಯ ವಿವಾಹ ನಿಷೇದಾಧಿಕಾರಿಗಳಿಗೆ ಶಾಲಾ ಶಿಕ್ಷಣ ಮುಖ್ಯೋಪಾಧ್ಯಾಯರಿಗೆ, ಪೋಲಿಸ್ ಅಧಿಕಾರಿಗಳಿಗೆ, ಗ್ರಾಮ ಲೆಕ್ಕಿಗರಿಗೆ, ಅಂಗನವಾಡಿ ಕಾರ್ಯಕರ್ತೆಯರಿಗೆ, ಆಶಾ ಕಾಯ್ಕರ್ತೆಯರಿಗೆ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಸಂವೇದನಾಶೀಲರನ್ನಾಗಿಸುವುದು.
- ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು (ಪಿಡಿಓ) ಬಾಲ್ಯ ವಿವಾಹ ತಡೆಗಟ್ಟವ ಹೊಣೆಗಾರ ಅಧಿಕಾರಿಯನ್ನಾಗಿ ಮಾಡುವುದು.
- ಮಕ್ಕಳ ಗ್ರಾಮ ಸಭೆಗಳನ್ನು ಪ್ರತಿ ವರ್ಷ ನವೆಂಬರ್ ತಿಂಗಳಲ್ಲಿ ಕಡ್ಡಾಯವಾಗಿ ನಡೆಸಿ ಮಕ್ಕಳ ಸಮಸ್ಯೆಗಳ ಮತ್ತು ಬಾಲ್ಯವಿವಾಹದ ದುಷ್ಪರಿಣಾಮಗಳ ಬಗ್ಗೆ ಹಾಗೂ ಮಕ್ಕಳ ಹಕ್ಕುಗಳ ಬಗ್ಗೆ ಅರಿವು ಮೂಡಿಸುವುದು.
- ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವಂತಹ ಶಾಲೆಗಳಲ್ಲಿ ಉತ್ತಮ ಶೌಚಾಲಯ ವ್ಯವಸ್ಥೆ ಮಾಡುವುದು.
- ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಬಾಲ್ಯ ವಿವಾಹಗಳು ನಡೆಯುತ್ತಿಲ್ಲವೆಂಬ ಬಗ್ಗೆ ಆಗಿಂದಾಗ್ಗೆ ಖಾತ್ರಿ ಪಡಿಸಿಕೊಳ್ಳುವುದು, ನಡೆಯುತ್ತಿರುವ ಹಾಗೂ ನಡೆಯಲಿರುವ ಎಲ್ಲಾ ವಿವಾಹಗಳನ್ನು ನೋಂದಣಿ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳುವುದು, ಪುನರ್ವಸತಿ ಅವಶ್ಯಕತೆ ಕಂಡು ಬಂದಲ್ಲಿ ಸೂಕ್ತ ಕ್ರಮ ಜರುಗಿಸಲಾಗುತ್ತಿದೆಯ? ಎಂಬ ಮಾಹಿತಿಗಳನ್ನು ಗ್ರಾಮ ಪಂಚಾಯ್ತಿಯಲ್ಲಿ ನಿರ್ವಹಿಸಬೇಕಾಗುತ್ತದೆ.
- **ಬಾಲ್ಯವಿವಾಹದ ನೆಪದಲ್ಲಿ** ಅಪ್ರಾಪ್ತ ಮಕ್ಕಳನ್ನು **ಅನೈತಿಕ ಸಾಗಾಣಿಕೆ** ಮಾಡುವಂತಹ ಸಂದರ್ಭದಲ್ಲಿ ಬಲಪಶುವಾದ ಮಗುವನ್ನು ಮನೆಗೆ ಸೇರಿಸುವುದು ಗ್ರಾಮಪಂಚಾಯ್ತಿಯ ಆದ್ಯ ಕರ್ತವ್ಯವಾಗಿರುತ್ತದೆ.
- ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಬಾಲ್ಯವಿವಾಹಕ್ಕೆ ಸಂಬಂಧಿಸಿದ ದೂರುಗಳನ್ನು ದಾಖಲಿಸುವ ವ್ಯವಸ್ಥೆಯನ್ನು ರೂಪಿಸಬೇಕು.

2) **ಆರೋಗ್ಯ ಇಲಾಖೆ:**

- ಸರಿಯಾದ ವಯಸ್ಸಿನ ದೃಢೀಕರಣ ಪ್ರಕ್ರಿಯೆಯಿಂದ ಬಾಲ್ಯ ವಿವಾಹದಲ್ಲಿ ಮಕ್ಕಳು ಬಲಿಪಶುಗಳಾಗುವುದನ್ನು ತಪ್ಪಿಸಬಹುದು.
- ಸ್ನೇಹ ಕ್ಲಿನಿಕ್ ಬಲಪಡಿಸುವುದು.
- ಎ.ಎನ್.ಎಂ ಮತ್ತು ಆಶಾ ಕಾರ್ಯಕರ್ತೆಯರು ಹದಿಹರೆಯದ ಹೆಣ್ಣುಮಕ್ಕಳಿಗೆ ಬಾಲ್ಯವಿವಾಹದಿಂದ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ತಿಳುವಳಿಕೆ ನೀಡಿ ಅವರ ಮನೋಭಾವನೆಯಲ್ಲಿ ಬದಲಾವಣೆ ಉಂಟಾಗುವಂತೆ ಸಮಾಲೋಚನೆ ನಡೆಸುವುದು.

3) **ಸಾಮೂಹಿಕ ವಿವಾಹ:**

- ಸಾಮೂಹಿಕ ವಿವಾಹ ಆಯೋಜಕರು ತಮ್ಮ ಸಂಘ ಸಂಸ್ಥೆಗಳನ್ನು ಕಡ್ಡಾಯವಾಗಿ ನೋಂದಣಿ ಮಾಡಿಸಿರಬೇಕು.
- ಸಾಮೂಹಿಕ ವಿವಾಹಗಳ ಬಗ್ಗೆ ಕಡ್ಡಾಯ ಮಾರ್ಗಸೂಚಿಗಳನ್ವಯ ಮದುವೆಗಳ ಪ್ರಮಾಣೀಕರಣ ಮತ್ತು ನೋಂದಣಿಯನ್ನು ನಿರ್ವಹಿಸಬೇಕು.

4) **ಐ.ಇ.ಸಿ(IEC) ಕಾರ್ಯಕ್ರಮ:**

- ಮುದ್ರಣ, ವಿದ್ಯುನ್ಮಾನ ತಂತ್ರಾಂಶ, ಬೀದಿನಾಟಕ, ದೂರದರ್ಶನ, ರೇಡಿಯೋ, ಕರಪತ್ರ, ಬ್ರೋಷರ್ಸ್, ಪ್ಲಕಾಡ್ ಇತ್ಯಾದಿಗಳ ಮುಖಾಂತರ ಪ್ರಚಾರದಿಂದ ಬಾಲ್ಯವಿವಾಹ ನಿಷೇಧದ ಬಗ್ಗೆ ಉತ್ತಮ ಪ್ರತಿಕ್ರಿಯೆ ದೊರೆಯಬಹುದಾಗಿದೆ.

5) **ರಕ್ಷಣೆ:**

- ಬಾಲ್ಯ ವಿವಾಹ ನಡೆಯುತ್ತಿದೆ ಎಂಬ ಮಾಹಿತಿ ಮತ್ತು ದೂರು ಬಂದೊಡನೆ ಕೂಡಲೇ ತುರ್ತಾಗಿ ಪ್ರತಿಕ್ರಯಿಸಿ ಘಟನೆ ಸಂಭವಿಸದಂತೆ ಮಗುವನ್ನು ರಕ್ಷಣೆ ಮಾಡಬಹುದು.
- ಸಾಕ್ಷ್ಯ ಸಂಗ್ರಹಣೆ ಮಾಡುವುದರಿಂದ ಪ್ರಕರಣವನ್ನು ಪರಿಣಾಮಕಾರಿಯಾಗಿ ವಿಚಾರಣೆ ನಡೆಸಲು ನ್ಯಾಯಾಲಯ/ಮ್ಯಾಜಿಸ್ಟ್ರೇಟರಿಗೆ ನೆರವಾಗುವುದು.
- ಬಾಲ್ಯವಿವಾಹ ನಡೆದು ಹೋಗಿರುವಂತಹ ಸಂದರ್ಭಗಳಲ್ಲಿ ವಸತಿ ಸೌಕರ್ಯ, ಶಿಕ್ಷಣ ಪ್ರಾಯೋಜಕತ್ವ, ವೃತ್ತಿಪರ ತರಬೇತಿ ಹಾಗೂ ಉದ್ಯೋಗ ನೇಮಕಾತಿ ಮುಖ್ಯವಾಗಿ ಪತಿಯ ಕುಟುಂಬದವರಿಂದ ಆಗಬಹುದಾದ ಕಿರುಕುಳದ ವಿರುದ್ಧ ರಕ್ಷಣೆ ಒದಗಿಸುವುದರ ಅಗತ್ಯ ನೆರವು ನೀಡುವುದರ ಮೂಲಕ ಮಕ್ಕಳಿಗೆ ರಕ್ಷಣೆಯನ್ನು ನೀಡಬಹುದು.

6) **ಮಕ್ಕಳ ಭಾಗವಹಿಸುವಿಕೆ:-**

- ಮಕ್ಕಳು ಗ್ರಾಮಸಭೆಗಳಲ್ಲಿ ಭಾಗವಹಿಸಿ ಸಂವಾದ ನಡೆಸಲು, ತಮ್ಮ ಸಮಸ್ಯೆಗಳಿಗೆ ಪರಿಹಾರ ಹುಡುಕಲು, ಕಾಳಜಿ ಮತ್ತು ಸಲಹೆಗಳನ್ನು ವ್ಯಕ್ತಪಡಿಸಲು, ಸಾಧ್ಯವಾಗುವಂತೆ ಅವರಿಗೆ ಮುಕ್ತ ಸಂಸ್ಥೆಗಳ ಮತ್ತು ಕ್ರಮತಂತ್ರಗಳ ಅವಕಾಶ ಒದಗಿಸುವುದು.
- ಮಕ್ಕಳ ಸಹಾಯವಾಣಿಗೆ ಕರೆಗಳು, ಮತ್ತಿತರ ಸೇವೆಗಳ ಕಾರ್ಯನಿರ್ವಹಣೆ ಕುರಿತ ಮಾಹಿತಿಯನ್ನು ಮಕ್ಕಳು ತಿಳಿದುಕೊಳ್ಳುವುದು ಸೂಕ್ತ.
- ಮಕ್ಕಳ ಕಲ್ಯಾಣ ಸಮಿತಿಗಳು, ಎಸ್‌ಜೆಪಿಯುಗಳು ಮತ್ತು ಮಕ್ಕಳ ಸಂರಕ್ಷಣಾ ಸಮಿತಿಗಳ ಮಕ್ಕಳ ರಕ್ಷಣಾಧಿಕಾರಿಗಳು ಮತ್ತು ಕೆಎಸ್‌ಸಿಪಿಸಿಆರ್ ಗಳ ಬಗ್ಗೆ ಮಕ್ಕಳಿಗೆ ಮಾಹಿತಿ ಒದಗಿಸಬೇಕು.
- ಬಾಲ್ಯವಿವಾಹಕ್ಕೊಳಪಟ್ಟ ಮಕ್ಕಳನ್ನು ರಕ್ಷಣೆ ಮಾಡಿ ಅವರಿಗೆ ವಿದ್ಯಾಭ್ಯಾಸ, ತರಬೇತಿ ಕೌಶಲ್ಯ, ರಕ್ಷಣೆ ಮುಂತಾದ ಸಕಲ ವ್ಯವಸ್ಥೆಯನ್ನು 30–45 ದಿನಗಳ ಒಳಗಾಗಿ ಮಾಡಬೇಕಾಗಿರುತ್ತದೆ.

"ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ."

ನಿರ್ದೇಶಕರ ಪರವಾಗಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಬೆಂಗಳೂರು